**National**
**Kannada**
**27.06.2025 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಚೀನಾದೊಂದಿಗಿನ ಗಡಿ ಗುರುತಿಸಲು ಸ್ಥಾಪಿತ ವ್ಯವಸ್ಥೆಗೆ ಕಾಯಕಲ್ಪ ನೀಡುವ ಮೂಲಕ ಶಾಶ್ವತ ಪರಿಹಾರ ; ಭಾರತದ ಕರೆ

೨. ಪ್ರಮುಖ ಮಿಲಿಟರಿ ಉಪಕರಣಗಳ ತ್ವರಿತ ಪೂರೈಕೆ ಕುರಿತಂತೆ ರಷ್ಯಾದೊಂದಿಗೆ ರಾಜನಾಥ್ ಸಿಂಗ್ ದ್ವಿಪಕ್ಷೀಯ ಮಾತುಕತೆ

೩. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ದೇಶದ ಆರ್ಥಿಕತೆಯ ಬೆನ್ನೆಲುಬು- ರಾಷ್ಟ್ರಪತಿ ದ್ರೌಪದಿ ಮುರ್ಮು

೪. ಭಾರತದಿಂದ ಮುಝಾಂಬಿಕ್ ದೇಶಕ್ಕೆ ಒಟ್ಟು ಹತ್ತು ಲೋಕೋಮೋಟಿವ್ ರೈಲು ರಫ್ತು

೫. ಪುರಿಯಲ್ಲಿ ವಿಶ್ವ ವಿಖ್ಯಾತ ರಥಯಾತ್ರೆ ಆರಂಭ; ಲಕ್ಷಾಂತರ ಶ್ರದ್ಧಾಳುಗಳು ಮಹೋತ್ಸವದಲ್ಲಿ ಭಾಗಿ

**<><*<><>*><>**

ಚೀನಾದೊಂದಿಗಿನ ಗಡಿ ಗುರುತಿಸುವಿಕೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಭಾರತ ಕರೆ ನೀಡಿದೆ. ೨೦೨೦ರ ಗಡಿ ನಿಲುಗಡೆ ನಂತರ ಉಭಯ ದೇಶಗಳ ನಡುವೆ ಉಂಟಾದ ವಿಶ್ವಾಸ ಕೊರತೆ ನಿವಾರಣೆ ಹಾಗೂ ಸ್ಥಾಪಿತ ವ್ಯವಸ್ಥೆಗೆ ಕಾಯಕಲ್ಪ ನೀಡುವ ಮೂಲಕ ಪರಿಹಾರಕ್ಕೆ ಮುಂದಾಗಬೇಕಿದೆ. ಭಾರತ-ಚೀನಾ ಗಡಿಯುದ್ದಕ್ಕೂ ಶಾಂತಿ, ಸಾಮರಸ್ಯ ಕಾಪಾಡಿಕೊಂಡು ಬರುವ ಅಗತ್ಯವಿದೆ ಮತ್ತು ಸೈನಿಕ ಜಮಾವಣೆಯನ್ನು ಕಡಿಮೆಗೊಳಿಸುವ ಹಾಗೂ ಶಾಶ್ವತ ನಿಯೋಜನೆ ಕುರಿತಾದ ನಿರೂಪಿತ ಮಾರ್ಗನಕ್ಷೆ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳುವ ಅವಶ್ಯಕತೆ ಇದೆ ಎಂದು ಭಾರತ ತಿಳಿಸಿದೆ. ಶಾಂಘೈ ಸಂಘಟನೆ ರಕ್ಷಣಾ ಸಚಿವರ ಸಭೆಯ ಸಂದರ್ಭದಲ್ಲಿ ಭಾರತದ ರಕ್ಷಣಾ ಸಚಿವ ರಾಜನಾಥ್ ಹಾಗೂ ಚೀನಾದ ರಕ್ಷಣಾ ಸಚಿವ ಅಡ್ಮಿರಲ್ ಡಾಂಗ್ ಜುನ್ ಮಾತುಕತೆ ನಡೆಸಿದರು. ದ್ವಿಪಕ್ಷೀಯ ಸಂಬಂಧ ಸಾಮಾನ್ಯ ಸ್ಥಿತಿಗೆ ಮರಳಲು, ಉಭಯ ದೇಶಗಳು ಕಾರ್ಯ ನಿರ್ವಹಿಸುತ್ತಿವೆ. ವಿಶ್ವದ ಹಾಗೂ ಏಷ್ಯಾ ಭಾಗದ ಸ್ಥಿರತೆಗಾಗಿ ಮತ್ತು ಪರಸ್ಪರರ ಲಾಭಕ್ಕಾಗಿ ಉತ್ತಮ ನೆರೆಹೊರೆ ವಾತಾವರಣ ಸೃಷ್ಟಿಸುವ ಅಗತ್ಯವಿದೆ ಎಂದು ರಾಜನಾಥ್ ಸಿಂಗ್ ಈ ಸಂದರ್ಭದಲ್ಲಿ ತಿಳಿಸಿದರು. ಸೈನಿಕ ಜಮಾವಣೆ ಕಡಿತ, ಶಾಶ್ವತ ನಿಯೋಜನೆ, ಗಡಿ ನಿರ್ವಹಣೆಗಳಿಗೆ ಸಂಬಂಧಿಸಿದಂತೆ ವಿವಿಧ ಸ್ತರಗಳಲ್ಲಿ ಸಮಾಲೋಚನೆಗಳನ್ನು ಮುಂದುವರೆಸಲು ಉಭಯ ದೇಶಗಳು ಸಹಮತ ವ್ಯಕ್ತಪಡಿಸಿದವು. ಪಹಲ್ಗಾಮ್ ಭಯೋತ್ಪಾದಕ ದಾಳಿ ಹಾಗೂ ನಂತರ ಪಾಕಿಸ್ತಾನದಲ್ಲಿರುವ ಉಗ್ರಗಾಮಿಗಳ ಕಾರ್ಯಜಾಲಗಳನ್ನು ನಾಶಮಾಡಲು ಭಾರತ ಕೈಗೊಂಡ 'ಆಪರೇಷನ್ ಸಿಂದೂರ್' ಬಗ್ಗೆಯೂ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಚೀನಾ ರಕ್ಷಣಾ ಸಚಿವರಿಗೆ ವಿವರ ನೀಡಿದರು.

**<><*<><>*><>**

ರಕ್ಷಣಾ ಸಚಿವ ರಾಜನಾಥ್ ಸಿಂಗ್, ಪ್ರಮುಖ ಸೈನಿಕ ಉಪಕರಣಗಳ ತ್ವರಿತ ಪೂರೈಕೆ ಕುರಿತಂತೆ, ರಷ್ಯಾ ರಕ್ಷಣಾ ಸಚಿವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಚೀನಾದ ಶಾಂಘೈ ಸಹಕಾರ ಸಂಘಟನೆಯ ಸಭೆಯ ಸಂದರ್ಭದಲ್ಲಿ ಸಚಿವ ರಾಜನಾಥ್ ಸಿಂಗ್, ರಷ್ಯಾದ ರಕ್ಷಣಾ ಸಚಿವ ಆಂಡ್ರಿ ಬೆಲುಸೋವ್ ಅವರೊಂದಿಗೆ ಎಸ್-೪೦೦ ವ್ಯವಸ್ಥೆ, ಆಧುನಿಕ ಎಸ್.ಯು-೩೦ಎಂ.ಕೆ.ಐ ಹಾಗೂ ಇತರ ಮಹತ್ವದ ಉಪಕರಣಗಳ ಪೂರೈಕೆ ಬಗ್ಗೆ ಸಮಾಲೋಚಿಸಿದರು.

<><*<><>*><>

ಚೀನಾದ ಶಾಂಘೈ ಸಹಕಾರ ಸಂಘಟನೆ ರಕ್ಷಣಾ ಸಚಿವರ ಸಭೆಯ ಉದ್ದೇಶಿತ ಜಂಟಿ ದಾಖಲೆಯಲ್ಲಿ ಉಗ್ರವಾದದ ಪ್ರಸ್ತಾಪವನ್ನು, ಒಂದು ದೇಶ ಬಯಸದ ಕಾರಣ ಭಾರತ ಅದಕ್ಕೆ ಸಹಿ ಹಾಕಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಭಯೋತ್ಪಾದಕತೆ ವಿರುದ್ಧ ಹೋರಾಡುವ ಉದ್ದೇಶದಿಂದಲೇ ಶಾಂಘೈ ಸಹಕಾರ ಸಂಘಟನೆ ರೂಪುಗೊಂಡಿದೆ ಎಂದು ಹೇಳಿದರು. ಜಂಟಿ ದಾಖಲೆಯಲ್ಲಿ ಉಗ್ರವಾದದ ಪ್ರಸ್ತಾಪ ಇರದಿದ್ದರೆ, ಭಾರತ ಅದಕ್ಕೆ ಸಹಿ ಹಾಕುವುದಿಲ್ಲ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸ್ಪಷ್ಟಪಡಿಸಿದ್ದಾರೆ ಎಂದು ಡಾ.ಎಸ್.ಜೈಶಂಕರ್ ತಿಳಿಸಿದ್ದಾರೆ.

<><*<><>*><>

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿಂದು ಸಾರ್ವಜನಿಕ ವಲಯ ಬ್ಯಾಂಕ್ ಗಳ ಕಾರ್ಯಕ್ಷಮತೆ ಪರಿಶೀಲನಾ ಸಭೆ ನಡೆಯಿತು. ಸಭೆಯಲ್ಲಿ ವಿವಿಧ ಮಾನದಂಡದ ಅನ್ವಯ ಬ್ಯಾಂಕ್ ಗಳ ಕಾರ್ಯಕ್ಷಮತೆ ಪರಿಶೀಲಿಸಲಾಯಿತು. ಈ ಸಂದರ್ಭದಲ್ಲಿ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ, ಹಣಕಾಸು ಸೇವೆಗಳ ಇಲಾಖೆ ಕಾರ್ಯದರ್ಶಿ ಎಂ. ನಾಗರಾಜು ಹಾಗೂ ಸಾರ್ವಜನಿಕ ವಲಯ ಬ್ಯಾಂಕ್ ಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

<><*<><>*><>

ಕಳೆದ ೧೧ ವರ್ಷಗಳಲ್ಲಿ ಒಡಿಶಾದ ರೈಲ್ವೇ ಮೂಲಸೌಕರ್ಯದಲ್ಲಿ ಅಪಾರ ಪ್ರಮಾಣದ ಐತಿಹಾಸಿಕ ಅಭಿವೃದ್ಧಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರು, ಈ ಬಗ್ಗೆ ಬರೆದ ಲೇಖನವನ್ನು ಉಲ್ಲೇಖಿಸಿರುವ ಪ್ರಧಾನಿ, ಭಾರತೀಯ ರೈಲ್ವೆ, ಜನಸಾಮಾನ್ಯರಿಗೆ ಅದರಲ್ಲಿಯೂ ವಿಶೇಷವಾಗಿ ಧಾರ್ಮಿಕ ಶ್ರದ್ಧಾಳುಗಳ ಅವಶ್ಯಕತೆಯನ್ನು ಪೂರೈಸುತ್ತಿದೆ. ಜಗನ್ನಾಥ ಪುರಿಗೆ ಶ್ರದ್ಧಾಳುಗಳಿಗಾಗಿ ವಿಶೇಷ ವ್ಯವಸ್ಥೆ ಮಾಡಿದೆ ಎಂದು ಪ್ರಧಾನಿಯವರು ತಿಳಿಸಿದ್ದಾರೆ.

<><*<><>*><>

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಗ್ರಾಮೀಣ ಹಾಗೂ ಹಿಂದುಳಿದ ಭಾಗಗಳಲ್ಲಿ ಉದ್ಯೋಗ ಸೃಷ್ಟಿಸಿದ್ದು, ಇವು ದೇಶದ ಆರ್ಥಿಕತೆಯ ಬೆನ್ನೆಲುಬಾಗಿವೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಅವರು, ನವದೆಹಲಿಯಲ್ಲಿಂದು ಅಂತಾರಾಷ್ಟ್ರೀಯ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು. ಈ ಉದ್ದಿಮೆಗಳು ದೇಶದ ಒಟ್ಟು ದೇಶೀಯ ಉತ್ಪನ್ನಕ್ಕೆ ಶೇಕಡಾ ೩೦, ತಯಾರಿಕಾ ವಲಯಕ್ಕೆ ಶೇಕಡಾ ೩೬ ಹಾಗೂ ರಫ್ತು ಕ್ಷೇತ್ರಕ್ಕೆ ಶೇಕಡಾ ೪೫ ರಷ್ಟು ಕೊಡುಗೆ ನೀಡುತ್ತಿವೆ. ಕೃಷಿಯ ನಂತರ ೨ನೇ ಅತಿ ದೊಡ್ಡ ಉದ್ಯೋಗ ಸೃಷ್ಟಿಸುವ ವಲಯ ಇದಾಗಿದೆ ಎಂದು ರಾಷ್ಟ್ರಪತಿಗಳು ತಿಳಿಸಿದರು. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು,

ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ಪೂರಕವಾಗಿದ್ದು, ತಳಮಟ್ಟದಲ್ಲಿ ಆರ್ಥಿಕ ರೂಪಾಂತರದ ಚಾಲಕ ಶಕ್ತಿಗಳಾಗಿವೆ. ಜಾಗತಿಕವಾಗಿಯೂ ಈ ಕೈಗಾರಿಕೆಗಳು, ವ್ಯಾಪಾರ ಪರಿಸರ ವ್ಯವಸ್ಥೆಯ ಪ್ರಬಲ ಕ್ಷೇತ್ರಗಳಾಗಿವೆ. ಸುಸ್ಥಿರ ಬೆಳವಣಿಗೆ ಮತ್ತು ಆವಿಷ್ಕಾರದ ಚಾಲಕ ಶಕ್ತಿಗಳಾಗಿ ಎಂ.ಎಸ್.ಎಮ್.ಇ ಈ ಬಾರಿಯ ಘೋಷವಾಕ್ಯವಾಗಿದೆ.

**<><*<><>*><>**

ಪುರಿಯಲ್ಲಿ ವಿಶ್ವ ವಿಖ್ಯಾತ ಭಗವಾನ್ ಜಗನ್ನಾಥ, ಭಗವಾನ್ ಬಲಭದ್ರ ಮತ್ತು ದೇವಿ ಸುಭದ್ರಾ ರಥಯಾತ್ರೆ ಪಾರಂಪರಿಕ ಹರ್ಷೋಲ್ಲಾಸದೊಂದಿಗೆ ಆರಂಭವಾಗಿದೆ. ಈ ವಾರ್ಷಿಕ ಮಹೋತ್ಸವನ್ನು ವೀಕ್ಷಿಸಲು ಲಕ್ಷಾಂತರ ಸಂಖ್ಯೆಯಲ್ಲಿ ಶ್ರದ್ಧಾಳುಗಳು ಪಾಲ್ಗೊಂಡಿದ್ದಾರೆ. ಧಾರ್ಮಿಕ ಪಹಂಡಿ ಬಿಜೆ ಆಚರಣೆಯೊಂದಿಗೆ ಜಗನ್ನಾಥ ಮಂದಿರದ ಗರ್ಭಗೃಹದಿಂದ ಭಗವಾನ್ ಜಗನ್ನಾಥ, ಭಗವಾನ್ ಬಲಭದ್ರ ಮತ್ತು ದೇವಿ ಸುಭದ್ರಾ ಅವರ ಉತ್ಸವ ಮೂರ್ತಿಗಳನ್ನು ಮೆರವಣಿಗೆಯಲ್ಲಿ ತಂದು ನಿರ್ದಿಷ್ಟ ರಥದಲ್ಲಿ ಪ್ರತಿಷ್ಠಾಪನೆಗೊಳಿಸುವ ಮುಲಕ ರಥೋತ್ಸವ ಆರಂಭಗೊಂಡಿದೆ.

**<><*<><>*><>**

ಕರ್ನಾಟಕದ ಚಾಮರಾಜನಗರದ ಮಲೆ ಮಹದೇಶ್ವರ ಬೆಟ್ಟದ ವನ್ಯಜೀವಿಧಾಮದಲ್ಲಿ ಒಂದು ಹುಲಿ ಮತ್ತು ನಾಲ್ಕು ಹುಲಿ ಮರಿಗಳ ಅಸಹಜ ಸಾವು ಕುರಿತಂತೆ ತನಿಖೆಗೆ ಆದೇಶಿಸಲಾಗಿದೆ. ಅರಣ್ಯ ಮುಖ್ಯ ಸಂರಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಈ ತನಿಖೆ ನಡೆಯಲಿದೆ ಎಂದು ಅರಣ್ಯ ಖಾತೆ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ. ಕರ್ನಾಟಕ ೫೬೦ಕ್ಕೂ ಹೆಚ್ಚು ಹುಲಿಗಳನ್ನು ಹೊಂದಿದ್ದು, ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. 'ಹುಲಿ ಯೋಜನೆಯಡಿ ಹುಲಿ ಸಂಖ್ಯೆಯನ್ನು ವೃದ್ಧಿಸಲು ಹಾಗೂ ಅವುಗಳ ರಕ್ಷಣೆ ಕೈಗೊಳ್ಳಲು ಇಲಾಖೆ ಶ್ರಮಿಸುತ್ತದೆ ಎಂದು ಸಚಿವ ಈಶ್ವರ್ ಖಂಡ್ರೆ ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

**<><*<><>*><>**

ದಕ್ಷಿಣ ಕೊಲ್ಕತ್ತಾದ ಕಾನೂನು ವಿದ್ಯಾರ್ಥಿನಿಯೊಬ್ಬಳ ಮೇಲೆ ಕಾಲೇಜು ಆವರಣದಲ್ಲಿ ನಡೆಯಿತೆನ್ನಲಾದ ದೌರ್ಜನ್ಯ ಘಟನೆ ವರದಿಯನ್ನು ರಾಷ್ಟ್ರೀಯ ಮಹಿಳಾ ಆಯೋಗ, ಸ್ವ-ಪ್ರೇರಣೆಯಿಂದ ಪರಿಗಣಿಸಿದೆ. ಆಯೋಗ, ಕೊಲ್ಕತ್ತಾ ಪೊಲೀಸ್ ಆಯುಕ್ತರಿಗೆ ಪತ್ರ ಬರೆದು ಘಟನೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಈ ಬಗ್ಗೆ ಮೂರು ದಿನಗಳ ಒಳಗೆ ವಿವರವಾದ ಕ್ರಮ ಕೈಗೊಂಡ ವರದಿ ಸಲ್ಲಿಸುವಂತೆ ಸೂಚಿಸಿದೆ.

**<><*<><>*><>**

ವಿಶ್ವ ಪೊಲೀಸ್ ಮತ್ತು ಅಗ್ನಿ ಶಾಮಕ ಕ್ರೀಡೆಗಳನ್ನು ಆಯೋಜಿಸಲು ಭಾರತ ಆಯ್ಕೆಯಾಗಿರುವುದಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂತಸ ವ್ಯಕ್ತಪಡಿಸಿದ್ದಾರೆ. ಇದು ಪ್ರತಿ ಭಾರತೀಯ ನಾಗರಿಕರಿಗೆ ಹೆಮ್ಮೆಯ ಕ್ಷಣವಾಗಿದೆ. ಈ ಪ್ರತಿಷ್ಠಿತ ಕ್ರೀಡೆ ಆಯೋಜನೆ ವಿಶ್ವಮಟ್ಟದಲ್ಲಿ ಭಾರತಕ್ಕೆ ದೊರೆತಿರುವ ಮಾನ್ಯತೆಯಾಗಿದೆ. ಈ ಕ್ರೀಡೆಗಳು ಅಹಮದಾಬಾದ್‌ನಲ್ಲಿ ನಡೆಯಲಿದ್ದು, ಒಟ್ಟು ೫೦ಕ್ಕೂ ಹೆಚ್ಚು ವಿಭಾಗಗಳಲ್ಲಿ ಕ್ರೀಡೆಗಳು ಜರುಗಲಿವೆ ಎಂದು ಸಮಾಜಿಕ ಜಾಲತಾಣದಲ್ಲಿ ಅವರು ತಿಳಿಸಿದ್ದಾರೆ.

**<><*<><>*><>**

ಸರ್ವಿಸಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್, ರೋಹ್‌ಟಕ್‌ನಲ್ಲಿ ನಡೆದ ೧೭ ವರ್ಷದೊಳಗಿನ ಬಾಲಕರ ಹಾಗೂ ಬಾಲಕಿಯರ ರಾಷ್ಟ್ರೀಯ ಬಾಕ್ಸಿಂಗ್ ಸಮಗ್ರ ಚಾಂಪಿಯನ್‌ಶಿಪ್ ಗೆದ್ದುಕೊಂಡಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>